confirmation ಮಾಡುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ರಾಜ್ಯಪಾಲರ ಸೂಚನೆ ನೀಡಿರತಕ್ಕಂಥಾದ್ದನ್ನು ನಾವು ಅಮೆಂಡ್‌ಮೆಂಟ್ ಮಾಡಿ ಇದರಲ್ಲಿ ಸೇರಿಸದಿದ್ದರೆ ಈಗಾಗಲೇ ಹರಾಜು ಆಗಿರುವ ಪ್ರಾಪರ್ಟಿಗಳನ್ನು ನಾವು confirmation ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಸುಮಾರು 160 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರತಕ್ಕಂಥಾದ್ದನ್ನು ವಾಪಸ್ಸು ತೆಗೆದುಕೊಂಡು ಅದನ್ನು ಹರಾಜು ಮಾಡಿ ಅದರಿಂದ ಸುಮಾರು 170 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಜಮಾ ಆಗುವಂಥ ಸಂದರ್ಭದಲ್ಲಿ ಹರಾಜು ಆಗಿರುವುದನ್ನು confirmation ಮಾಡಬೇಕಾಗುತ್ತದೆ. ಈಗ confirmation ಆಗದೇ ಇರುವುದಕ್ಕೆ ಇದು ಬಹಳ ತುರ್ತೆಂದು ತೆಗೆದುಕೊಂಡಿದ್ದೇವೆಯೇ ಹೊರತು ಪ್ರತಿಪಕ್ಷದವರನ್ನು ಹೊರಗಿಟ್ಟು ಈ ಬಿಲ್ ಅನ್ನು ಪಾಸ್ ಮಾಡತಕ್ಕಂಥ ಕೆಲಸವನ್ನು ನಾವೇನು ಮಾಡುತ್ತಿರಲಿಲ್ಲ. ತುಂಬಾ ಅರ್ಜೆನ್ಸಿ ಇರುವುದರಿಂದ ಮಾಡುತ್ತಿದ್ದೇವೆ ಹೊರತು ಬೇರೆ ದೃಷ್ಟಿಕೋನವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ ದಯವಿಟ್ಟು ಈ ಬಿಲ್‌ಗೆ ಅನುಮೋದನೆ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

(8:30 pm)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಾನು ಹೊರಗೆ ಹೋದರೆ ಕೋರಂ ಎಲ್ಲಿ ಆಗುತ್ತದೆ. ಕೋರಂ ಇಲ್ಲದೆ ಬಿಲ್‌ಅನ್ನು ಹೇಗೆ ಪಾಸ್ ಮಾಡುತ್ತೀರಿ. ನಾನು ಹೊರಗೆ ಹೋಗುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ :– ನೀವು ಹೊರಗೆ ಹೋದರು ಕೋರಂ ಆಗುತ್ತದೆ.

(ಈ ಹಂತದಲ್ಲಿ ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

<u>ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005</u>

<u>ಪುನರ್ ಪರ್ಯಾಲೋಚನೆ ಪ್ರಸ್ತಾವ</u>

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವ 2005 ನೇ